103 (275) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)((ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಪತ್ತೆ ಹಚ್ಚಲಾದ ನಕಲಿ ಪಡಿತರ ಚೀಟಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವಿರ ಒದಗಿಸುವುದು):

ಆ. ರಾಜ್ಯದಲ್ಲಿ ಇದೇ ಅವಧಿಯಲ್ಲಿ ವಿತರಿಸಲಾದ ಬಿಪಿಎಲ್ ಕಾರ್ಡುಗಳ ಸಂಖ್ಯೆ ಎಷ್ಟು(ಜಿಲ್ಲಾವಾರು ವಿವಿರ ಒದಗಿಸುವುದು):

ಇ. ಪ್ರಸಕ್ತ ಸಾಲಿನಲ್ಲಿ ಬಿಪಿಎಲ್ ಕಾರ್ಡುಗಳನ್ನು ವಿತರಿಸುವ ಗುರಿಯನ್ನು ಹೊಂದಾಲಾಗಿದೆ ಹಾಗೂ ಇದಕ್ಕಾಗಿ ರಾಜ್ಯಾದ್ಯಂತ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗಿದೆಯೇ;

ಈ. ಕೈಗೊಂಡಿದ್ದಲ್ಲಿ, ಈ ಕಾರ್ಯವು ಯಾವ ಹಂತದಲ್ಲಿ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)?

ಗೋವಿಂದ. ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು)

ಅ. ರಾಜ್ಯದಲ್ಲಿ 2005–06ನೇ ಸಾಲಿನಲ್ಲಿ ಪತ್ತೆ ಹಚ್ಚಲಾದ ನಕಲಿ ಪಡಿತರ ಚೀಟಿಗಳ ಸಂಖ್ಯೆ 13,355 ಜಿಲ್ಲಾವಾರು ವಿವರ ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ.
ರಾಜ್ಯದಲ್ಲಿ ಈ ಅವಧಿಯಲ್ಲಿ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯ ನಡೆಸಲಾಗಿರುವುದರಿಂದ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಿಲಾಗುವುದಿಲ್ಲ.

ಆ. ರಾಜ್ಯದಲ್ಲಿ ಈ ಅವಧಿಯಲ್ಲಿ ಮನೆ ಮನೆಯ ಪುನರ್ ಸಮೀಕ್ಷಾ ಕಾರ್ಯ ನಡೆಸಲಾಗಿರುವುದರಿಂದ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿರುವುದಿಲ್ಲ.

ಇ. ಕಳೆದ ಸಾಲಿನಲ್ಲಿ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯಕೈಗೊಂಡು ಅರ್ಹ ಫಲಾನುಭವಗಳನ್ನು ಗುರುತಿಸಲಾಗಿದ್ದು. ಈ ಫಲಾನುಭವಗಳಿಗೆ ಗಣಕೀಕೃತ ಪಡಿತರ ಚೀಟಿಗಳನ್ನು ಪ್ರಸಕ್ತ ಸಾಲಿನಲ್ಲಿ ವಿತರಿಸಲಾಗುವುದು. ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರುವ ಬಿಪಿಎಲ್ ಫಲಾನುಭವಿಗಳ ಸಂಖ್ಯೆ 52,46,705 ಮತ್ತು ಅಂತ್ಯೂದಯ ಅನ್ನ ಯೋಜನೆಯ ಫಲಾನುಭವಿಗಳ ಸಂಖ್ಯೆ 11,99,700.

ಈ. ಮನೆ ಮನೆ ಪುನರ್ ಸಮೀಕ್ಷೆ ಸೆಪ್ಟಂಬರ್ 2005 ರ ಮಾಹೆಯಲ್ಲಿ ಮುಕ್ತಾಯಗೊಂಡಿರುತ್ತದೆ. ಜಿಲ್ಲಾವಾರು ವಿವಿರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಅನುಬಂಧ -1

ಏಪ್ರಿಲ್ 2005 ರಿಂದ ಫೆಬ್ರವರಿ 2006 ರವರೆಗೆ ರದ್ದುಪಡಿದಲಾದ ಹಳದಿ ಪಡಿತರ ಚೀಟಿಗಳ ವಿವರ

ಕ್ರಮ.ಸಂ	ಜಿಲ್ಲೆಯ ಹೆಸರು	ರದ್ದುಪಡಿಸಲಾದ ಪಡಿತರ ಚೀಟಿಗಳ ವಿವರ
1	ಬಾಗಲಕೋಟೆ	0
2	ಬೆಂಗಳೂರು ಅಪ	82
3	ಬೆಂಗಳೂರು ಗ್ರಾಮಾಂತರ	22
4	ಬೆಂಗಳೂರು ನಗರ	4340
5	ಬೆಳಗಾಂ	0
6	ಬಳ್ಳಾರಿ	0
7	ಬೀದರ್	0
8	ಬಿಜಾಪುರ	0
9	ಚಾಮರಾಜನಗರ	0
10	ಚಿಕ್ಕಮಗಳೂರು	0
11	ಚಿತ್ರದುರ್ಗ	0
12	ದಕ್ಷಿಣ ಕನ್ನಡ	337
13	ದಾವಣಗೆರೆ	493
14	ಧಾರವಾಡ	0
15	ಗದಗ್	13
16	ಗುಲ್ಬರ್ಗ	0
17	ಹಾಸನ	75
18	ಹಾವೇರಿ	25
19	ಕೊಡಗು	0
20	ಕೋಲಾರ	0
21	ಕೊಪ್ಪಳ	0
22	ಮಂಡ್ಯ	727
23	ಮೈಸೂರು	0
24	ರಾಯಚೂರು	0
25	ಶಿವಮೊಗ್ಗ	694
26	ತುಮಕೂರು	6547
27	ಉಡುಪಿ	0
28	ಉತ್ತರ ಕನ್ನಡ	0
	ಒಟ್ಟು	**13355**